ಲೇಖನ 04

# ಪ್ರಕೃತಿಯ ಆರಾಧನೆಯ ದ್ಯೋತಕ ಫಲಾವಳಿಯ "ಕೋಡನಗೆಜ್ಜೆ"

ಸನಾತನ ಸಂಸ್ಕೃತಿಯಲ್ಲಿ ಸಸ್ಯವಿಲ್ಲದೇ ನಮ್ಮ ಬದುಕಿಲ್ಲ ಈ ಭೂಮಿಯಲ್ಲಿರುವ ವೃಕ್ಷಗಳು ಸಂಸಾರದ ಸಂಜೀವಿನಿಯಾಗಿದೆ. ಮನುಷ್ಯನ ಶಾಂತಿ, ನೆಮ್ಮದಿಯ ಜೀವನಕ್ಕೆ ಸದೃಢ ಶಾರೀರ ಬೆಳವಣಿಗೆ ಅಗತ್ಯ. ಇದು ಸಸ್ಯಾಹಾರದಿಂದ ಮಾತ್ರ ಸಾಧ್ಯವೆಂದು ನಮ್ಮ ಪೂರ್ವಜರು ಮನಗಂಡಿದ್ದರು. ಅಂತಹ ಗಿಡಮರಗಳ ಲಕ್ಷಣಗಳನ್ನು ತಿಳಿಯಲು ಪ್ರಾರಂಭಿಸಿದರು. ಈ ರೀತಿಯಲ್ಲಿ ಜೀವನಾವಶ್ಯಕ ಸಸ್ಯ ಸಂಪತ್ತನ್ನು ಸಂರಕ್ಷಿಸುವ ವಿಧಾನ ಕಂಡುಕೊಂಡು ಅಭಿವೃದ್ಧಿಗೊಳಿಸಲು ಮೊದಲು ಮಾಡಿದರು. ನಮ್ಮ ಪೂರ್ವಜರು ತಮ್ಮ ಅನುಭವದಿಂದ ಕಂಡುಕೊಂಡ ಸತ್ಯವನ್ನು, ಅವರು ಸಾಗಿಬಂದ ದಾರಿಯನ್ನು ನಾವು ಅರಿಯಬೇಕಾದರೆ ಪ್ರಾಚೀನ ಆಚರಣೆ ನಂಬಿಕೆ, ನಡವಳಿಕೆ, ಸಂಪ್ರದಾಯಗಳ ಕುರಿತು ಆಳವಾದ ಚಿಂತನೆ ನಡೆಸುವದು ಅಗತ್ಯವಾಗಿದೆ. "ಭೂಮಿಯೊಳೆಷ್ಟು ಮರಗಳೋ ಎದ್ದು ಬಗೆಬಗೆಯಿಂದಲಿ ಮೆಟ್ಟಿ ನಿಂತು ನೆಲವ ಬಗೆಯಿಂದಲಿ ಮೆಟ್ಟಿಕೊಳುತಿದೆ, ತೊಗಟೆಯೂ, ಬೇರುಗಳು ಕೊಂಬೆಗಳು, ಹೂವುಗಳು ಎಲೆಗಳು ಕಾಯುತಿವೆ ಹಲವಾಗಿ ಭೂಮಿಯನುಳಿಸಲು" ಅಗಣಿತ ಸಂಖ್ಯೆಯಲ್ಲಿ ಹಸಿರು ಮರಗಳು ಈ ಭೂಮಿಯಲಿ ಹುಟ್ಟಿ ಬೆಳೆದು ಲೋಕದ ಸೇವೆಯನ್ನು ಮಾಡುತ್ತಿವೆ. ಇರುವದೊಂದೆ ಭೂಮಿಯನ್ನು ಉಳಿಸಲು ನಿರಂತರ ಕಾರ್ಯ ಮಾಡುತ್ತಿರುವ ಸಸ್ಯ ಪ್ರಭೇದಗಳಲ್ಲಿ ಅಪರೂಪವಾಗಿರುವ ಮರಬಳ್ಳಿ ಕೋಡನಗೆಜ್ಜೆ.

ಕೋಡನಗೆಜ್ಜೆಯನ್ನು ಫಲಾವಳಿ ಕಟ್ಟುವ ಸಂಪ್ರದಾಯ ಪ್ರಕೃತಿಯ ಆರಾಧನೆಯ ದ್ಯೋತಕವಾಗಿದೆ.



ಚಿತ್ರ ಕೃಪೆ: ಕೆ ಪಿ ಧನಂಜಯ್ ಕುಮಾರ್

ಯಾವ ಋತು ಕಾಲದಲ್ಲಿ ಯಾವ ಯಾವ ಸಸ್ಯಗಳು ಉದ್ಭವಿಸುತ್ತವೆಯೋ ಅಂಥವುಗಳನ್ನು ಆಯಾ ಋತುವಿನಲ್ಲಿ ಬರುವ ಹಬ್ಬ ಹರಿದಿನಗಳು, ವ್ರತಗಳಲ್ಲಿ ಮಂಗಲಕಾರ್ಯಗಳಲ್ಲಿ, ಜಾತ್ರೆ ಉತ್ಸವಾದಿಗಳಲ್ಲಿ, ಅಪರಕಾರ್ಯಗಳಲ್ಲಿ ಮನುಷ್ಯನನ್ನು ದೀರ್ಘಾಯುಷಿ ಮಾಡಬಲ್ಲ ಷೋಡಶ ಸಂಸ್ಕಾರ ನೀಡುವ ಕಾರ್ಯದಲ್ಲಿ, ಯಜ್ಞ-ಯಾಗಗಳಲ್ಲಿ, ಹೋಮ-ಹವನದಲ್ಲಿ, ದೇವತಾ ಪ್ರಾಣ ಪ್ರತಿಷ್ಠೆಯ ತಿಳಿಸುವ ಆಗಮ ಶಾಸ್ತ್ರದಲ್ಲಿ ಉಪಯೋಗಿಸುವ ಸೂತ್ರ ಹಾಕಿಕೊಟ್ಟಿರುವದು ನಮ್ಮ ಹಿರಿಯರ ದೂರದೃಷ್ಟಿಯ ದ್ಯೋತಕವಾಗಿದೆ.

ಈ ರೀತಿಯಲ್ಲಿ ನಿರ್ದಿಷ್ಟ ಅವಧಿಯಲ್ಲಿ ನಿಗದಿತವಾಗಿ ಬಳಕೆಯಾಗುವಂತೆ "ಅ"ಕಾರ ಸ್ವರೂಪದಲ್ಲಿರುವ ಅರ್ಚನೆ, ಅಲಂಕಾರ, ಆಹಾರ, ಆರೋಗ್ಯ, ಆಹುತಿ ಈ ಸೂತ್ರ ನಮಗೆ ಅಚ್ಚರಿ ಮೂಡಿಸುವ ಒಂದು ವಿಜ್ಞಾನವೇ ಆಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ಗೌರಿ ದೇವಿಯನ್ನು ಪ್ರಕೃತಿಯ ಮೂರ್ತರೂಪವಾಗಿ ಪೂಜಿಸಲಾಗುತ್ತದೆ. ವಿವಿಧ ಸಸ್ಯಗಳಿಂದಲೇ ಗೌರಿಯ ಮೂರ್ತರೂಪಗೊಳಿಸುವ ಪರಿಪಾಠ ಶತಮಾನಗಳಿಂದಲೂ ನಡೆದುಕೊಂಡು ಬಂದಿದೆ. ಗೌರಿ ನತ್ತು ( ಸರ್ಪಗಂಧ ಗಿಡದ ಮೊಗ್ಗು) ಗೌರಿ ಮುತ್ತು (ಮುತ್ತು ಪೋಣಿಸಿದಂತೆ ಇರುವ ಒಂದು ಹೂವಿನ ಬಳ್ಳಿ) ಗೌರಿವಾಲೆ ( ಮೂರುಮೂಲೆ ಕಾಯಿಬಿಡುವ ಒಂದು ಬಳ್ಳಿ) ಗೌರಿ ತೊಂಡಿಲು (ಈಶ್ವರಿ ಬಳ್ಳಿ ಹೂವು) ಗೌರಿ ಹೂವು ( ಅಗ್ನಿ ಶಿಖೆ) ಗೌರಿ ಜಡೆ ( ಶತಾವರಿ ಬಳ್ಳಿ) ಇವೆಲ್ಲವೂ ಗೌರಿ ಮಂಟಪ ಅಲಂಕರಿಸುವ ಫಲಾವಳಿಗಳು. ಫಲಾವಳಿ ಅನ್ನುವದು ಬಹು ಪ್ರಾಚೀನವಾದುದು. ಮಂಟಪಕ್ಕೆ ಕಟ್ಟುವ ಎಲೆ ವಸ್ತ್ರ ಹಣ್ಣು, ಆಹಾರ ಪದಾರ್ಥಗಳೇ ಫಲಾವಳಿಯ ಸಾಮಗ್ರಿಗಳು. ಮತ್ತೆ ಮುಖ ಮಂಟಪಕೆ ಕಟ್ಟಿ ಫಲವಳಿಗೆಯಂ ಸುತ್ತಲೊಪ್ಪಿತು ಶಾಲೆ ಇದು ತುರಂಗ ಭಾರತ ಗ್ರಂಥದಲ್ಲಿ ಬರೆದ ಸಾಲುಗಳು.



ಚಿತ್ರ ಕೃಪೆ: ಕೆ ಪಿ ಧನಂಜಯ್ ಕುಮಾರ್

ಫಲವಳಿಗೆ ಮೇಲ್ಕಟ್ಟು ಹೊಳೆವ ಭಸಿತಂಗಳೋಳು ವಿಭವದಿಂ ಶ್ರೀ ಗುರು ಪ್ರಭು ಬಂದ ಪುಣ್ಯದಿಂ ಇದು ದೀಕ್ಷಬೋಧೇಯಲ್ಲಿ, ಮಂಟಪದೊಳು ಸಿಂಹಪೀಠವನ್ನಿಕ್ಕಿ ಉತ್ತಮದ ಸಪುರಂಗಳಾ ವಿಸ್ತರದಿವಳವಡಿಸಿ ಫಲವಳಿಗೆಯಂ ಕಟ್ಟಿ ರಾಜ ಮಹಾರಾಜರ ಕಾಲದಲ್ಲಿ ದೇವರ ಉತ್ಸವಕೆ ಕಟ್ಟುವ ಫಲಾವಳಿಯ ಕುರಿತು ಲಿಂಗಪುರಾಣದಲ್ಲಿ ದಾಖಲಿಸಿದ್ದಾರೆ. ಫಲವಳಿಗೆಯ ಬಗೆಗೆ ಪ್ರಾಚೀನ ಗ್ರಂಥಗಳಲ್ಲೂ ಉಲ್ಲೇಖ ನಾವು ಕಾಣಬಹುದು. ಕೈಲಾಸದಿಂದ ಭೂಲೋಕಕೆ ಆಗಮಿಸುವ ಗೌರಿ ಗಣೇಶರಿಗೆ ಹಸಿರು ಮಂಟಪ ಕಟ್ಟಿ ಸ್ವಾಗತಿಸುವ ವಿಧಾನವೇ ಫಲಾವಳಿಯ ಕಮಾನು. ದೀವರ ಸಮುದಾಯದಲ್ಲಿ ಪಳಿಯುಳಿಕೆ ಕಟ್ಟುವದು ಎನ್ನುವರು. ಫಲಾವಳಿ ಎಂದರೇ ಶುಭದ ಸಂಕೇತ ಮತ್ತು ಮಂಗಳಕರವೆಂದು ಭಾವಿಸಲಾಗಿದೆ. ಇದು ಪೂಜಾ ಸ್ಥಳಕ್ಕೆ ಒಂದು ವಿಶೇಷ ಸೌಂದರ್ಯ ಮತ್ತು ಪಾವಿತ್ರತೆಯನ್ನು ತರುತ್ತದೆ. ಈ ರಚನೆಯು ಹಬ್ಬದ ವಾತಾವರಣವನ್ನು ಈ ರೀತಿ ಮತ್ತಷ್ಟು ಪಾವನಗೊಳಿಸುತ್ತದೆ.

ಕಾಡುಮೂಲದಿಂದ ತರುವ ತರುಲತೆ-ಫಲಪುಷ್ಪಗಳು ಅನೇಕ. ಗಂಗಮ್ಮನ ಬಳ್ಳಿ, ಕೋಡನಗೆಜ್ಜೆ, ಭುವನಗಿರಿಕಾಯಿ, ಕಾಡುಕಂಚಿ, ಕಲ್ಲಕರ್ಕಿಬಳ್ಳಿ ಅಗ್ನಿಶಿಖೆ ಹೂವು, ಆರತಿ ಕುಂಡಿಗೆ, ಗವಟೆ ಬಳ್ಳಿ, ಅರಮಾದಲು, ಜುಮ್ಮನ ಕಾಯಿ. ಅಣಲೆಕಾಯಿ, ಗುಡ್ಡೆಯಾಲಕ್ಕಿ, ಪಾಂಡವರ ಅಡಿಕೆ, ಸಿಂಗಾರ. ಕಾರೆಕಾಯಿ, ಮಾಡಹಾಗಲಕಾಯಿ, ಬಿಕ್ಕೆಕಾಯಿ, ಕೆಸವಿನ ಬೀಳು ಇವುಗಳ ಜೊತೆಗೆ ಬೆಳೆದ ಅಡಿಕೆ ತೆಂಗು, ಯಾಲಕ್ಕಿ, ಕಾಳುಮೆಣಸು ತರಕಾರಿಗಳು ಕಟ್ಟುವದು ಈ ನಾಡಿನ ಸಂಪ್ರದಾಯವಾಗಿದೆ. ಕಾಡಿನಿಂದ ತರುವ ಎಲ್ಲಾ ಸಸ್ಯಗಳು ನೂರಕ್ಕೆ ನೂರು ಔಷಧಿಯ ಗುಣ ಹೊಂದಿರುತ್ತವೆ.

ಮಾನವನ ಜೀವವುಳಿಸುವ ನೂರಾರು ಸಾವಿರಾರು ಸಸ್ಯಗಳನ್ನು ಧಾರ್ಮಿಕ ಜನಪದರ ಕೃಷಿ ಆಚರಣೆಯಲ್ಲಿ ಅರ್ಚನೆ ಅಲಂಕಾರ, ಆಹಾರ ಆರೋಗ್ಯ, ಆಹುತಿ ಸೂತ್ರದಡಿಯಲ್ಲಿ ಬಳಸುವದನ್ನು ರೂಢಿಗೊಳಿಸಿ ಸಸ್ಯ ಸಂರಕ್ಷಣೆಯ ಮಾರ್ಗವನ್ನು ನಮ್ಮ ಹಿರಿಯರು ಹಾಕಿಕೊಟ್ಟಿದ್ದಾರೆ.

ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಕಂಡುಬರುವ ಒಂದು ಮರಬಳ್ಳಿ ಪ್ರಭೇದ ಕೋಡನಗೆಜ್ಜೆ ಕರ್ನಾಟಕ ಕೇರಳ, ತಮಿಳುನಾಡುಗಳಲ್ಲಿಯೂ ವ್ಯಾಪನೆಯಿರುವ ತೊಲಗೆ ಗಿಡದ ವೈಜ್ಞಾನಿಕ ಕುಲಕುಟುಂಬ ನೋಡೋಣ. ಕಾನರೇಸಿ ಸಸ್ಯ ಕುಟುಂಬದ ಸದಸ್ಯನಾಗಿರುವ ಕೋಡನಗೆಜ್ಜೆಯ ವೈಜ್ಞಾನಿಕ ಹೆಸರು ಕಾನರಸ್ ವೈಟಿ. ಕೊಂಕಣ ಜಿಬ್ರಾವುಡ್ ಎಂದು ಕರೆಯುತ್ತಾರೆ. ಕನ್ನಡದಲ್ಲಿ ತೋರಲಕ್ಕಿ, ತೊಲಗೆ, ಮಂಗನಗೆಜ್ಜೆ, ಕೋಡನಗೆಜ್ಜೆ, ಬಾಯಿತುಟಿಕಾಯಿ ಎಂಬ ಹೆಸರು ಪಡೆದುಕೊಂಡಿದೆ. ಮಲಯಾಳಂನಲ್ಲಿ ಕುರುಂಗಿಲ್ ಕೊಂಕಣಿಯಲ್ಲಿ ಘಾಗ್ರ್ಯ ಎನ್ನುತ್ತಾರೆ. ಭಾರತೀಯ ಧಾರ್ಮಿಕ ಆಚರಣೆಗಳಲ್ಲಿ ಉಪಯೋಗಿಸುವ ಪ್ರತಿ ಸಸ್ಯವೂ ಔಷಧಿಯ ಸಸ್ಯವೇ ಆಗಿದೆ. ಕೋಡನಗೆಜ್ಜೆಯ ಬೇರುಗಳಿಂದ ತೆಗೆದ ಸಾರಗಳನ್ನು ಸಾಂಪ್ರದಾಯಿಕವಾಗಿ ಹೃದಯ ರಕ್ತನಾಳ ಮತ್ತು ಕೇಂದ್ರ ನರಮಂಡಲದ ಮೇಲೆ ಪರಿಣಾಮ ಬೀರುವ ಕಾಯಿಲೆಗಳಿಗೆ ಬಳಸುತ್ತಾರೆ. ಹೈಪೋಟೆನ್ಸ್‌ನ್ ಪರಿಹಾರಿಸುತ್ತದ್ದೆ. ಪಶ್ಚಿಮ ಕರಾವಳಿಯ ಗೋವಾದಿಂದ ಭಟ್ಕಳ ತನಕ ಗಣೇಶ ಹಬ್ಬದ ಫಲಾವಳಿಯ ಸಾಲಿನಲ್ಲಿ ಸೇರಿಕೊಳ್ಳುತ್ತದೆ. ಮಾತೋಳಿ ಕಟ್ಟುವದು ಎನ್ನುವರು. ಹೊನ್ನಾವರದ ಶಿಕ್ಷಕ ದಿನೇಶ ರೇವಣಕರ ಹೇಳುವಂತೆ ನೂರಾರು ವರ್ಷಗಳಿಂದ ಕೋಡನಗೆಜ್ಜೆಯನ್ನು ಫಲಾವಳಿ ಕಟ್ಟುವ ಪದ್ದತಿಯಿದೆ. ಗಣಪತಿ ವಿಸರ್ಜನೆಯ ಪೂಜೆಯ ಸಮಯದಲ್ಲಿ ಕೋಡನಗೆಜ್ಜೆ ಅವಶ್ಯ ಬೇಕು ಎಂದು ತಿಳಿಸಿದರು. ಡ್ಯೂಡೋರಿಕ್ಸ್ ಎಪಿಜಾರ್ಬಾಸ್ ಎಂಬ ಚಿಟ್ಟೆಯ ಪ್ರಬೇಧಗಳಿಗೆ ಲಾರ್ವಾ ಆತಿಥೇಯ ಸಸ್ಯವಾಗಿ ಕಾರ್ಯ ನಿರ್ವಹಿಸುತ್ತದೆ. ಕಾಂಡವನ್ನು ಕತ್ತರಿಸಿ ಮತ್ತು ಕಸಿ ಕಟ್ಟುವದರ ಮೂಲಕ ಮರುಹುಟ್ಟು ಪಡೆಯಬಹುದು.

ಸಸ್ಯಗಳ ಮೌಲ್ಯಗಳು ಮತ್ತು ಅವುಗಳ ಪಾರಂಪರಿಕ ಜ್ಞಾನ ಪರಿಚಯ ಪೀಳಿಗೆಯಿಂದ ಪೀಳಿಗೆಗೆ ಹರಿಯುತ್ತಿರಬೇಕೆಂಬ ಆಶಯದಿಂದ ಫಲಾವಳಿ ಪರಂಪರೆ ಬೆಳೆದು ಬಂದಿದೆ ಎನ್ನಬಹುದು. ಫಲಾವಳಿ ಮಲೆನಾಡಿನ ಕೃಷಿ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಪ್ರಕೃತಿಯಿಂದಲೇ ಜೀವನ ಕಟ್ಟಿಕೊಳ್ಳುವ ಜನರು ಅದಕ್ಕೆ ಗೌರವ ಸಮರ್ಪಣೆ ಮಾಡುವ ವಿಧಾನವಾಗಿದೆ. ಫಲಾವಳಿ ಕೇವಲ ಅಲಂಕಾರಿಕ ವಸ್ತು ಆಗಿರದೇ ಅದು ಮಲೆನಾಡಿನ ಜನರ ನಂಬಿಕೆ, ಸಂಪ್ರದಾಯ ಮತ್ತು ಕಲಾತ್ಮಕತೆಯನ್ನು ಪ್ರತಿಬಿಂಬಿಸುವ ಒಂದು ಪ್ರಮುಖ ಸಾಂಸ್ಕೃತಿಕ ಅಂಶವಾಗಿದೆ. ಗೌರಿದೇವಿಯೂ ಪ್ರಕೃತಿಯ ದೈವಿಕ ರೂಪವಾಗಿದ್ದು, ಆಕೆಯು ಫಲವತ್ತತೆ ಮತ್ತು ಸಮೃದ್ದಿಯನ್ನು ಪ್ರತಿನಿಧಿಸುತ್ತಾಳೆ. ಗೌರಿ ಹಬ್ಬದ ಸಮಯದಲ್ಲಿ ಪೂಜಿಸುವದು ಎಂದರೆ ಪ್ರಕೃತಿಯನ್ನು ಗೌರವಿಸುವದು ಮತ್ತು ಉತ್ತಮ ಫಸಲು ಹಾಗೂ ಸಮೃದ್ದಿಗಾಗಿ ದೇವಿಯ ಆಶೀರ್ವಾದ ಕೋರುವದು. ಗೌರಿ ಹಬ್ಬವು ಪ್ರಕೃತಿ ಮತ್ತು ಮಾನವ ಜೀವನದ ನಡುವಿನ ಅವಿನಾಭಾವ ಸಂಬಂಧವನ್ನು ಗಟ್ಟಿಗೊಳಿಸುವ ಶುಭ ಸಮಯ. ಫಲಾವಳಿ ಕಟ್ಟೋಣ ಪರಿಸರ ರಕ್ಷಿಸುವ ಶಪಥ ಮಾಡೋಣ

**ಉಮಾಪತಿ ಭಟ್ಟ ಕೆ ವಿ**
**ಅಧ್ಯಕ್ಷರು ಮತ್ತು ಪರಿಸರ ಕಾರ್ಯಕರ್ತರು**
**ಸಮಗ್ರ ವಿಕಾಸ ಟ್ರಸ್ಟ್, ಶಿರಸಿ**